# ಅಡಿಕೆ ಮರದ ಮೌಲ್ಯವರ್ಧನೆ

ಬೆಲೆಯ ಏರಿಳಿತಗಳಿಂದ ಸದಾ ಗೊಂದಲದಲ್ಲೇ ಇರುವ ಅಡಿಕೆ ಬೆಳೆಗಾರ, ಅಡಿಕೆ ಮರದಿಂದ ಸಿಗುವ ಹಾಳೆ, ಸೋಗೆ, ದಬ್ಬೆ ಎಲ್ಲವನ್ನೂ ಮೌಲ್ಯವರ್ಧನೆ ಮಾಡುವ ಹಂಬಲದಲ್ಲಿದ್ದಾನೆ. ಈಗಾಗಲೇ ಅಡಿಕೆ ಹಾಳೆಗಳಿಂದ ತಯಾರಾಗುವ ಪ್ಲೇಟ್‌ಗಳು ಜನಪ್ರಿಯವಾಗಿವೆ. ಎಲ್ಲ ಕಡೆಯಿಂದಲೂ ಉತ್ತಮ ಮಾರುಕಟ್ಟೆ ಪಡೆದುಕೊಂಡಿವೆ. ಅಡಿಕೆ ಮರದ ದಬ್ಬೆಯನ್ನು ಪೀಠೋಪಕರಣಗಳಿಗೆ ಬಳಸುವುದೂ ನಡೆದಿದೆ. ಅದರ ಮುಂದುವರಿದ ಭಾಗವೇ ಮರದಲ್ಲಿ ಕಲೆ ಅರಳಿಸುವುದು.

ಶಿರಸಿಯ ಯುವಕ ಕೃಷ್ಣಮೂರ್ತಿಯವರು ಒಣ ಅಡಿಕೆ ಮರವನ್ನೂ 'ವರ್ಲಿ' ಕಲೆಗೆ ಬಳಸಿಕೊಂಡು ಅದರ ಮೌಲ್ಯವರ್ಧನೆ ಮಾಡಿದ್ದಾರೆ. ಒಣಗಿದ ಅಡಿಕೆ ಮರದ ನಿರುಪಯೋಗಿಯಾಗುವ ಬುಡದ ಭಾಗವನ್ನು ಹೂಕುಂಡದ ಆಕಾರದಲ್ಲಿ ಯಂತ್ರದ ಸಹಾಯದಿಂದ ತಯಾರಿಸಿಕೊಂಡು, ಅದರ ಮೇಲೆ ವಾರ್ನಿಶ್ ಬಳಿದರು. ನಂತರ ಜನಪದರ ಸಾಂಪ್ರದಾಯಿಕ ಕಲೆಯಾದ 'ವರ್ಲಿ' ಯನ್ನು ಹೂಕುಂಡದ ಸುತ್ತಲೂ ಅಲಂಕಾರ ಮಾಡಿ, ಅದರ ಸೊಬಗು ಹೆಚ್ಚಿಸಿದ್ದಾರೆ. ಒಲೆಗೆ ಉರುವಲಾಗಿ ಅಥವಾ ತೋಟದಲ್ಲಿ ಗೆದ್ದಲು ಹಿಡಿದು ಮಣ್ಣಾಗಲಿದ್ದ ಒಣ ಅಡಿಕೆ ಮರವು ಕಲಾವಿದನ ಕೈಯಲ್ಲಿ ಕಲಾಕೃತಿಯಾಗಿ ಅರಳಿ ಉತ್ತಮ ಬೆಲೆ ಕಾಣುವಂತಾಗಿದೆ.

**ಚಿತ್ರ ಬರಹ: ಅರ್ಚನಾ ಬೊಮ್ನಳ್ಳಿ, ಶಿರಸಿ**





# 360 ವರ್ಷದ ಕಲ್ಲಿನ ಹಂಡೆ

ಇದು ಏಕ ಶಿಲೆಯಲ್ಲಿ ರೂಪಗೊಂಡ ಹಂಡೆ. ಇದು ಆದಿಲ್‌ಶಾಹಿ ಕಾಲದಲ್ಲಿ ನಿರ್ಮಾಗೊಂಡಿದ್ದು ಎನ್ನಲಾಗಿದ್ದು, ಸದ್ಯ ವಿಜಯಪುರದ ಹಾಶಿಂಪೀರ ದರ್ಗಾದಲ್ಲಿ ಇದನ್ನು ಇರಿಸಲಾಗಿದೆ. ಇದು ಅತ್ಯಂತ ಪುರಾತನವಾಗಿದ್ದು, 360 ವರ್ಷಗಳಷ್ಟು ಹಳೆಯದು. ಇದರಲ್ಲಿ ನೀರು ತುಂಬಿಸಿಟ್ಟರೆ ಸದಾ ಕಾಲ ತಂಪಾಗಿರುತ್ತದೆ. ಶುಕ್ರವಾರದ ನಮಾಜು ಮಾಡುವ ಮುನ್ನ ಇದರಲ್ಲಿರುವ ನೀರನ್ನು ತುಂಬಿಕೊಂಡು ವಜು ಮಾಡಲಾಗುತ್ತದೆ.

**ಚಿತ್ರ- ಬರಹ: ಕಲ್ಪನಾ ಚ.ಮಠಪತಿ, ವಿಜಯಪುರ**

# ಹುತಾತ್ಮರ ಸ್ಮಾರಕ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿಯವರ ಆಶಯದಂತೆ ಧಾರವಾಡದಲ್ಲಿ ಹಿಂದೂ ಮತ್ತು ಮುಸಲ್ಮಾನರು ಒಂದಾಗಿ ಹೋರಾಡಿದ್ದು ವಿಶೇಷ. 26.03.1919ರಂದು ಹಿಂದೂ ಮತ್ತು ಮುಸಲ್ಮಾನರು ಖಿಲಾಫತ್ ದಿನವನ್ನು ಆಚರಿಸಲು ಕರಪತ್ರ ಹಂಚಿದರು. ಚಳವಳಿಗಾರರು ಶಾಂತಿಯುತವಾಗಿ ಮೆರವಣಿಗೆ ನಡೆಸಿದರು. ಸರಾಯಿ ಅಂಗಡಿಗಳನ್ನು ಬಂದ್ ಮಾಡಿಸಿದರು. ಎಲ್ಲರೂ ಮೆರವಣಿಗೆಯಲ್ಲಿ ಪೊಲೀಸ್ ಸ್ಟೇಷನ್ ಎದುರಿಗೆ ಜಮಾಯಿಸಿದರು. ಇದನ್ನು ಸಹಿಸದ ಆಗಿನ ಕಲೆಕ್ಟರ್ ಪೇಂಟರ್ ಕೆಲವರನ್ನು ಬಂಧಿಸಿ ಆರು ತಿಂಗಳು ಕಠಿಣ ಶಿಕ್ಷೆ ವಿಧಿಸಿದರು. ಕೆಲವರು ಈ ಅನ್ಯಾಯದ ವಿರುದ್ಧ ಪ್ರತಿಭಟಿಸಲು 30.06.1920ರಂದು ಶಾಂತಿಯುತವಾಗಿ ಮೆರವಣಿಗೆಯಲ್ಲಿ ಹೊರಟು ಪೊಲೀಸ್ ಠಾಣೆ ಎದುರಿಗೆ ಸೇರಿದರು. ಆಗಿನ ಕಲೆಕ್ಟರ್ ಎಚ್. ಎಲ್. ಪೇಂಟರ್ ಸರಾಯಿ ಅಂಗಡಿಗೆ ಬೆಂಕಿ ಹಚ್ಚಿದ್ದಾರೆ ಎಂದು ಸುಳ್ಳು ನೆಪವೊಡ್ಡಿ ಗೋಲಿಬಾರಿಗೆ ಆದೇಶ ನೀಡಿದರು. ಈ ಗೋಲಿಬಾರ್‌ನಲ್ಲಿ ಧಾರವಾಡದ ಜಕಣೀಬಾವಿ ಬಳಿ ಮಲ್ಲಿಕಸಾಬ್, ಗೌಸ್‌ಸಾಬ್ ಮತ್ತು ಅಬ್ದುಲ್ ಖಾದರ್ ಹುತಾತ್ಮರಾದರು. 39 ಸ್ವಯಂಸೇವಕರು ಗಾಯಗೊಂಡರು. ದೇಶಕ್ಕಾಗಿ ಹುತಾತ್ಮರಾದವರ ಚಿರನೆನಪಿಗಾಗಿ ಧಾರವಾಡದ ಜಕಣೀಬಾವಿ ಬಳಿ ಹುತಾತ್ಮರ ಸ್ಮಾರಕ ನಿರ್ಮಿಸಲಾಗಿದೆ. ಪ್ರತಿವರ್ಷ ಗೋಲಿಬಾರ್ ದಿನದಂದು ದೇಶಭಕ್ತರು ಇಲ್ಲಿ ಸೇರಿ ಸ್ಮಾರಕಕ್ಕೆ ಪೂಜೆ ಸಲ್ಲಿಸಿ ಹುತಾತ್ಮರ ಆತ್ಮಕ್ಕೆ ಶಾಂತಿ ಕೋರುತ್ತಾರೆ.

**- ಪಂಪಾಪತಿ ಹಿರೇಮಠ, ಧಾರವಾಡ**

